Annual Report of NSS - 2015-16

# ರಾಷ್ಟ್ರೀಯ ಸೇವಾ ಯೋಜನಾ ಘಟಕ 1 ಮತ್ತು 2

### ತುಂಗಾ ಮಹಾವಿದ್ಯಾಲಯ, ಆನಂದಗಿರಿ, ತೀರ್ಥಹಳ್ಳಿ

## ನಿತ್ಯ ಚಟುವಟಿಕೆಗಳ ವರದಿ

2015–16ನೇ ಸಾಲಿನ ಯೋಜನೆಯ ಚಟುವಟಿಕೆಗಳು ಶ್ರಮದಾನ, ಸೇವೆ, ಅರಿವು–ಜಾಗೃತಿ, ಭಾಗವಹಿಸುವಿಕೆ ಎಂದು ವಿವಿಧ ರೀತಿಯಲ್ಲಿ ನಡೆದವು.

ದಿನಾಂಕ:15–08–2015ರ ಶನಿವಾರ 69ನೇ ಸ್ವಾತಂತ್ರ್ಯ ದಿನವನ್ನು ಕಾಲೇಜಿನಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರು, ಅಧ್ಯಾಪಕರು, ಕಾಲೇಜಿನ ಆವರಣದಲ್ಲಿ ಸ್ವಚ್ಛತಾ ಅಂದೋಲನದ ಮೂಲಕ ನಡೆಸಿದರು.

ದಿನಾಂಕ:12–01–2016 ರಂದು ತೀರ್ಥಹಳ್ಳಿಯ ಬಂಟರ ಭವನದಲ್ಲಿ ಮಂಗಳೂರು ವಿದ್ಯುತ್‌ಶಕ್ತಿ ಸರಬರಾಜು ಕಂ., ಮಂಗಳೂರು (ಮೆಸ್ಕಾಂ) ವತಿಯಿಂದ ಆಯೋಜಿಸಲಾಗಿದ್ದ 'ವಿದ್ಯುತ್ ಸೇವೆಗಳ ಕುರಿತು ಮಾಹಿತಿ ಕಾರ್ಯಗಾರ'ದಲ್ಲಿ ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿಗಳು ಭಾಗವಹಿಸಿ ಮಾಹಿತಿ ಪಡೆದರು.

ದಿನಾಂಕ:30–09–2015 ರಂದು ಎನ್.ಎಸ್.ಎಸ್. ದಿನ'ದ ಪ್ರಯುಕ್ತ ಕಾಲೇಜಿನ ಆವರಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹಿಂದಿನ ಎನ್.ಎಸ್.ಎಸ್. ಅಧಿಕಾರಿಯಾಗಿದ್ದ ಪ್ರೊ. ಕೆ.ಟಿ. ರಮೇಶ್ ಎನ್.ಎಸ್.ಎಸ್. ಸ್ಥಾಪನೆಯ ಉದಾತ್ತ ಉದ್ದೇಶವನ್ನು ಸ್ವಯಂ ಸೇವಕರಿಗೆ ವಿವರಿಸಿದರು.



Scanned by CamScanner

ದಿನಾಂಕ:02-10-2015 ರಂದು 147ನೇ ಗಾಂಧಿ ಜಯಂತಿಯನ್ನು ಸ್ವಚ್ಛ ಭಾರತ ಅಭಿಯಾನದ ಹಿನ್ನೆಲೆಯಲ್ಲಿ ಕಾಲೇಜಿನ ಸ್ವಯಂಸೇವಕರು, ಅಧ್ಯಾಪಕರು ತರಗತಿ ಕೊಠಡಿಗಳನ್ನು ತೊಳೆದು ಸ್ವಚ್ಛಗೊಳಿಸುವ ಮೂಲಕ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ಹಾಗೂ ಗಣರಾಜ್ಯೋತ್ಸವದ ದಿನದಂದು ಕಾಲೇಜಿನ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯದ ಮೂಲಕ ನೆರವೇರಿಸಲಾಯಿತು.

ಅಕ್ಟೋಬರ್ ತಿಂಗಳಲ್ಲಿ ನಡೆದ ಪುರುಷ ಮತ್ತು ಮಹಿಳಾ ವಾಲಿಬಾಲ್ ವಿ.ವಿ. ತಂಡದ ಆಯ್ಕೆ ಮತ್ತು ಮಾರ್ಚ್ 05 ರಂದು ನಡೆದ ಅಂತರ ಕಾಲೇಜು ಮಟ್ಟದ ವಾಲಿಬಾಲ್ ಪಂದ್ಯಗಳಿಗೆ ಕ್ರೀಡಾಂಗಣದ ಸ್ವಚ್ಛತೆ ಮಾಡಿ ಸಿದ್ಧಗೊಳಿಸಲಾಯಿತು.

ಸ್ವಾಮಿ ವಿವೇಕಾನಂದರ 153ನೇ ಜಯಂತಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ 'ಯುವ ಸಪ್ತಾಹ' (12-01-16,19-01-2016)ದ ಹಿನ್ನೆಲೆಯಲ್ಲಿ ದಿನಾಂಕ:19-01-2016 ರಂದು ಶ್ರೀ ಅಂಬರೀಷ ಭಾರದ್ವಾಜ್‌ರವರಿಂದ ವಿವೇಕಾನಂದರ ಕುರಿತು ವಿಶೇಷ ಉಪನ್ಯಾಸ ಕೊಡಿಸಲಾಯಿತು.

ತೀರ್ಥಹಳ್ಳಿಯ ಪಟ್ಟಣ ಪಂಚಾಯಿತಿಯವರು ಹಮ್ಮಿಕೊಂಡಿದ್ದ ಸ್ವಚ್ಛ ಭಾರತ ಅಭಿಯಾನ ಮಾಸಾಚರಣೆಯ ಹಿನ್ನೆಲೆಯಲ್ಲಿ ನಡೆಸಲಾದ ಸ್ವಚ್ಛತಾ ಕಾರ್ಯದಲ್ಲಿ ಸ್ವಯಂ ಸೇವಕರು, ಯೋಜನಾಧಿಕಾರಿಗಳು ಊರಿನ ಪ್ರಮುಖ ಬೀದಿಗಳಲ್ಲಿ ಸ್ವಚ್ಛತಾ ಕಾರ್ಯ ಮಾಡಿದರು.

ದಿನಾಂಕ:09-04-2016 ರಂದು ತೀರ್ಥಹಳ್ಳಿ ಸಮೀಪದ ಭಾರತೀಪುರದ ವಿಹಂಗಮ (ನರ್ಸರಿ, ಹೋಂ ಸ್ಟೇ) ಕ್ಕೆ ಸ್ವಯಂಸೇವಕರನ್ನು ಕರೆದೊಯ್ದು ಶ್ರೀಯುತ ಕಡಿದಾಳ್ ದಯಾನಂದ್‌ರವರಿಂದ ವೈಜ್ಞಾನಿಕ ಕೃಷಿ ಪದ್ಧತಿ, ಪ್ರವಾಸೋದ್ಯಮದ ಕುರಿತಂತೆ ಮಾಹಿತಿ ಕೊಡಿಸಲಾಯಿತು.

ದಿನಾಂಕ:22-04-2016 ರಂದು ಕಟ್ಟೆಹಕ್ಕಲು ಗ್ರಾಮದಲ್ಲಿ ಒಂದು ದಿನದ ಶಿಬಿರ ಆಯೋಜಿಸಿ ಸ್ವಚ್ಛ ಭಾರತ ಅಭಿಯಾನದ ಹಿನ್ನೆಲೆಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ, ಸಂತೆ ನಡೆಸುವ ಜಾಗದಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ಪ್ಲಾಸ್ಟಿಕ್ ನಿರ್ಮೂಲನೆ, ಅಂತರ್ಜಲದ ಬಗ್ಗೆ ಅರಿವು ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು.

ಈ ಸಾಲಿನಲ್ಲಿ ನಮ್ಮ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕರು ಜಿಲ್ಲಾ ಮಟ್ಟದ, ವಿವಿ ಮಟ್ಟದ ಸೇವಾ ಯೋಜನಾ ಶಿಬಿರಗಳಲ್ಲಿ, ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕಾಲೇಜಿನ ದ್ವಿತೀಯ ಬಿ.ಎ. ವಿದ್ಯಾರ್ಥಿ ಶ್ರೀ ಕಾರ್ತಿಕ್ ಕೆ.ವಿ. ಮಂಡ್ಯದ ಮಳವಳ್ಳಿಯ ಶಾಂತಿ ಕಾಲೇಜ್‌ನಲ್ಲಿ ನಡೆದ ರಾಷ್ಟ್ರೀಯ ಯುವಜನೋತ್ಸವದಲ್ಲಿ ಕುವೆಂಪು ವಿವಿ ಎನ್.ಎಸ್.ಎಸ್. ಸಾಂಸ್ಕೃತಿಕ ತಂಡದ ಸಾರಥ್ಯ ವಹಿಸಿ 24 ವಿವಿಗಳು ಭಾಗವಹಿಸಿದ ವಿವಿಧ ಸ್ಪರ್ಧೆಯಲ್ಲಿ ಕುವೆಂಪು ವಿವಿ ಸಮಗ್ರ ತಂಡ ಪ್ರಶಸ್ತಿ ಪಡೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದಾನೆ. ಅದೇ ರೀತಿ ಧಾರವಾಡದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಭಾಗವಹಿಸಿ ಕುವೆಂಪು ವಿವಿ ತಂಡ 'ಉತ್ತಮ ತಂಡ' ಪ್ರಶಸ್ತಿ ಪಡೆಯಲು ಕಾರಣನಾಗಿದ್ದಾನೆ ಹಾಗೂ ಉಜಿರೆಯ ಎಸ್.ಡಿ.ಎಂ. ಕಾಲೇಜಿನಲ್ಲಿ ನಡೆದ 5 ದಿನಗಳ ಯುವಜನೋತ್ಸವದಲ್ಲಿ ಕಾಲೇಜಿನ ಕೆ.ವಿ. ಕಾರ್ತಿಕ್ ಮತ್ತು ಸುರ್ಯೆಯತ್‌ರವರು 16 ವಿವಿಗಳು ಭಾಗವಹಿಸಿ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕುವೆಂಪು ವಿವಿ ಎನ್.ಎಸ್.ಎಸ್. ತಂಡ ಸಮಗ್ರ ಪ್ರಶಸ್ತಿ (over all champion) ಪಡೆಯಲು ಇವರ ಪಾತ್ರ ಹಿರಿದು.

ನಡೆದಾಡುವ ಕಂಪ್ಯೂಟರ್ ಎಂದೇ ಖ್ಯಾತರಾದ ಹುಟ್ಟುಕುರುಡ ಅಥಣಿ ಬಸವರಾಜ್‌ರಿಂದ ದಿನಾಂಕ:27-01-2016 ರಂದು ಕಾಲೇಜಿನ ವಿದ್ಯಾರ್ಥಿಗಳಿಗೆ 'ಗಣಿತ ಚಮತ್ಕಾರ' ಕಾರ್ಯಕ್ರಮ ಕೊಡಿಸಿ ಎನ್.ಎಸ್.ಎಸ್. ವತಿಯಿಂದ ಹಣ ಸಂಗ್ರಹಿಸಿ ನೀಡಲಾಯಿತು.



Scanned by CamScanner

ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿ ಕೆ.ವಿ. ಕಾರ್ತಿಕ್ ವಿವಿಧ ಕಡೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಸಂಗ್ರಹಿಸಲಾದ ಹಣವನ್ನು ಅಪಘಾತದಿಂದ ಮೆದುಳು ನಿಷ್ಕ್ರಿಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಶಿವಮೊಗ್ಗ ವಿನೋಬನಗರದ ವಾಸಿ ಶ್ರೀ ಮಂಜುನಾಥ್‌ರವರ ತಾಯಿಗೆ ಚಿಕಿತ್ಸಾ ವೆಚ್ಚಕ್ಕೆ 6500.00 ರೂ.ಗಳನ್ನು ನೀಡಲಾಯಿತು. ದಿನಾಂಕ:13-01-2016 ರಂದು ಶಿವಮೊಗ್ಗ ತಾ॥ ಬೆನ್ನಹಳ್ಳಿ ಗ್ರಾಮದ ಕೃಷ್ಣ ಪೂಜಾರಿಯವರ ಮಗಳಾದ ಕು. ದೀಪಾ ಕ್ಯಾನ್ಸರ್ ಕಾಯಿಲೆಯಿಂದ ನರಳುತ್ತಿದ್ದು ಚಿಕಿತ್ಸೆಗಾಗಿ ಸ್ವಯಂ ಸೇವಕರಿಂದ 4500/- ರೂ.ಗಳನ್ನು ಸಂಗ್ರಹಿಸಿ ನೀಡಲಾಯಿತು. ಅಡುಗೆ ಗ್ಯಾಸ್ ಸಿಲಿಂಡರ್ ಸ್ಫೋಟಿಸಿ ಮೈಕೈ ಸುಟ್ಟು ಗಾಯಗೊಂಡ ಶಿವಮೊಗ್ಗ ನಗರದ ವಾಸಿ ಸರಸ್ವತಿ ನಾರಾಯಣಾಚಾರ್‌ರವರಿಗೆ ಹಣ ಸಂಗ್ರಹಿಸಿ ಎನ್.ಎಸ್.ಎಸ್.ವತಿಯಿಂದ ನೀಡಲಾಯಿತು.

ಈ ಸಾಲಿನಲ್ಲಿ ಕಾಲೇಜಿನ ಆವರಣ, ಸುತ್ತಮುತ್ತ ಸ್ವಚ್ಛತೆ, ಕಾಲೇಜಿನ ಮುಂಭಾಗದ ರಸ್ತೆಯ ನಿರ್ವಹಣೆಯನ್ನು ಮಾಡಲಾಯಿತು. ಕಾಲೇಜಿಗೆ ಸಮೀಪವಿರುವ ಇಂದಾವರ-ಬದನೆಹಿತ್ಲು ಗ್ರಾಮದಲ್ಲಿ ಮುಂದಿನ ದಿನಗಳಲ್ಲಿ ಶ್ರಮದಾನ-ಅರಿವು, ಜಾಗೃತಿ, ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಗುರಿಯನ್ನು ಹೊಂದಲಾಗಿದೆ. ಎನ್.ಎಸ್.ಎಸ್. ಸಲಹಾ ಸಮಿತಿಯ ಸದಸ್ಯರೂ ಈ ಕುರಿತು ಆಸಕ್ತಿ ತೋರಿದ್ದು, ಈ ನಿಟ್ಟಿನಲ್ಲಿ ನಮ್ಮ ಸ್ವಯಂ ಸೇವಕರು ತೊಡಗಿಸಿಕೊಳ್ಳುವಂತೆ ಮಾಡುವುದು ನಮ್ಮ ಯೋಜನೆಯಾಗಿದೆ.

Scanned by CamScanner